

# ಸ್ಟ್ಯಾಂಡ್‌ಅಪ್ ಕಾಮಿಡಿ ಅಂದರೆ ಮಿಮಿಕ್ರಿ ಅಲ್ಲ

**ರಾಘವೇಂದ್ರ ಆಚಾರ್ಯ**
ಝೀ ಕನ್ನಡ 'ಕಾಮಿಡಿ ಕಿಲಾಡಿಗಳು' ಸ್ಪರ್ಧಿ

◆ **ಸ್ಟ್ಯಾಂಡ್‌ಅಪ್ ಕಾಮಿಡಿಗೆ ಕನ್ನಡದಲ್ಲಿ ಒಳ್ಳೆಯ ಪ್ರತಿಕ್ರಿಯೆ ಸಿಗುತ್ತಿದೆಯೇ?**

ಖಂಡಿತ ತುಂಬ ಪ್ರೋತ್ಸಾಹ ಸಿಗ್ತಿದೆ. ಬೆಂಗಳೂರಿನಲ್ಲಿ ಅವಕಾಶಗಳು ಹೆಚ್ಚಿವೆ. ಕಾಲೇಜು, ಐಟಿ ಕಂಪನಿಗಳಲ್ಲಿ ನಮ್ಮ ಕಾಮಿಡಿಯನ್ನು ಅತಿಯಾಗಿ ಇಷ್ಟಪಡುತ್ತಾರೆ. ಆಶ್ಚರ್ಯ ಅಂದರೆ, ಐಟಿ ಕಂಪನಿಗಳಲ್ಲೇ ತುಂಬ ಬೆಂಬಲ ಸಿಗುತ್ತಿದೆ. ಈಗಾಗಲೇ ನಮ್ಮ ಹಿರಿಯರು ವೇದಿಕೆಯನ್ನು ಸೃಷ್ಟಿಸಿದ್ದಾರೆ. ನಂತರದ ತಲೆಮಾರಿನವರಾದ ನಾವು ಅದನ್ನು ಬಳಸಿಕೊಳ್ಳುತ್ತಿದ್ದೇವೆ.

◆ **ನಿಮ್ಮಲ್ಲಿ ಹಾಸ್ಯ ಅಭಿರುಚಿ ಮೂಡಿದ್ದು ಹೇಗೆ?**

ಮೂಲತಃ ಕೊಪ್ಪಳ ಜಿಲ್ಲೆಯ ಕುಷ್ಟಗಿ ನಮ್ಮೂರು. ನಮ್ಮ ಅಜ್ಜ ಕೀರ್ತನೆ ಹೇಳುತ್ತಿದ್ದರು. ಅಪ್ಪ ಪ್ರಹ್ಲಾದ್ ಆಚಾರ್ಯ ಸಕ್ಕರೆ ಕಾರ್ಖಾನೆ ಉದ್ಯೋಗದಲ್ಲಿದ್ದರು. ಅಮ್ಮ ಪರಿಮಳ. ನಾನು ಬೆಂಗಳೂರಿಗೆ ಸ್ನಾತಕೋತ್ತರ ಪದವಿ (ಮೈಕ್ರೊಬಯಾಲಜಿ) ಅಧ್ಯಯನಕ್ಕೆ ಬಂದೆ. ಒಂದೆರಡು ವರ್ಷ ಅಧ್ಯಾಪಕನಾಗಿಯೂ ಕೆಲಸ ಮಾಡಿದ್ದೆ. ಆಡಿಯೊ ಮಾಧ್ಯಮ ಸಂಸ್ಥೆಯ ಕನ್ನಡ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದೇನೆ. ಝೀ ಕನ್ನಡದ ಚಿತ್ರೀಕರಣ ವಾರಾಂತ್ಯದಲ್ಲಿ ಇರುವುದರಿಂದ ಎರಡನ್ನೂ ನಿಭಾಯಿಸುತ್ತೇನೆ.

ನಮ್ಮ ಭಾಗದಲ್ಲಿ ಹಾಸ್ಯ ಪ್ರವೃತ್ತಿ ಹೆಚ್ಚಿದೆ. ನಮ್ಮ ತಂದೆ ಕೂಡ ಹಾಸ್ಯವನ್ನು ಮಾಡುತ್ತಾರೆ. ಬೀಚಿ ಸಾಹಿತ್ಯವನ್ನು ಚೆನ್ನಾಗಿ ಓದಿಕೊಂಡಿದ್ದಾರೆ. ಹಿಂದಿಯ ರಾಜೇಶ್ ಶ್ರೀವಾಸ್ತವ್ ಅವರ ಕಾಮಿಡಿ ಕೂಡ ಪ್ರೇರಣೆ ನೀಡಿದೆ. ಅವರಿಂದ ಸ್ಟ್ಯಾಂಡ್‌ಅಪ್ ಕಾಮಿಡಿ ಮಾಡಬಹುದು ಎನ್ನುವುದು ಗೊತ್ತಾಯಿತು. ಮಿಮಿಕ್ರಿಯನ್ನು ಚಿಕ್ಕದಾಗಿ ಮಾಡುತ್ತಾ ಇದನ್ನು ರೂಢಿಸಿಕೊಂಡೆ. ಸ್ಟ್ಯಾಂಡ್‌ಅಪ್ ಕಾಮಿಡಿ ವಿಷಯಾಧಾರಿತವಾಗಿ ಇರುತ್ತದೆ.

◆ **ಹೊಸ ನಗೆ ಮಾತನ್ನು ಹೇಗೆ ಕಟ್ಟುತ್ತೀರಿ?**

ಬರವಣಿಗೆಯೂ ನನ್ನ ಹವ್ಯಾಸ. ನಾಟಕಗಳನ್ನು ರಚಿಸಿದ್ದೇನೆ. ಕೆಲವು ಪ್ರದರ್ಶನ ಕೂಡ ಆಗಿವೆ. ಜನರ ಜೊತೆ ಹೆಚ್ಚು ಬೆರೆಯುದರಿಂದ ಹೊಸ ವಿಷಯಗಳು ಸಿಗುತ್ತವೆ. ಕಾರ್ಪೊರೇಟ್ ಸಂಸ್ಥೆಯಲ್ಲಿ ಕೆಲಸ ಮಾಡುವುದರಿಂದ ಅದರ ವಾತಾವರಣವೂ ಗೊತ್ತಾಗುತ್ತದೆ. ಆದಷ್ಟು ನಾನು ಅನುಕರಣೆಯನ್ನು ಮಾಡುವುದಿಲ್ಲ. ನನ್ನ ಅನುಭವಗಳನ್ನೇ ಅನಾವರಣ ಮಾಡುತ್ತೇನೆ.

ಉದಾಹರಣೆ: 'ಯಾತಕ್ಕ ಮಾತಾಡ್ತಿದ್ದೀ ರೊಕ್ಕ ಇಲ್ಲೇನು' ಎಂದು ಒಬ್ಬ ನೇರವಾಗಿ ಕೇಳಿದ್ದ. ನಾನು ಸ್ಟ್ಯಾಂಡ್‌ಅಪ್ ಮಾಡುತ್ತೇನೆ ಅಂದರೆ, ಪಾಪ ಏನೋ ಕಷ್ಟ ಇರಬೇಕು ಎಂದು ಆತ ಭಾವಿಸಿದ್ದ.

ಮತ್ತೊಬ್ಬ 'ಟೀವಿಯಲ್ಲೇ ಒಂಥರಾ ಕಾಣಿಸ್ತೀ, ಇಲ್ಲೇ ಒಂಥರಾ ಕಾಣಿಸ್ತೀ, ಟೀವಿಯಲ್ಲಿ ಮೇಕಪ್ ಗೀಕಪ್ ಮಾಡ್ತಾರಲ್ಲ, ಎಷ್ಟೇ ಅಸಹ್ಯ ಇದ್ರೂ ಚೆನ್ನಾಗಿ ಕಾಣಿಸ್ತಾರೆ ಅಲ್ಲನಪಿ' ಅಂದಿದ್ದ. ಇಂತಹ ಘಟನೆಗಳು ತುಂಬ ನಡೆಯುತ್ತಿರುತ್ತವೆ.

◆ **ಸಾರ್ವಜನಿಕ ಕಾರ್ಯಕ್ರಮಗಳನ್ನು ನಿರ್ವಹಿಸುವ ಸವಾಲುಗಳು ಏನು?**

ಟೀವಿ ಅಥವಾ ಯೋಜಿತ ಶೋಗಳ ವೀಕ್ಷಕರಲ್ಲಿ ಸಿದ್ಧತೆ ಇರುತ್ತದೆ. ಅಂದರೆ ನಾವು ಏನು ಮಾಡುತ್ತೇವೆ ಎನ್ನುವುದು ಅವರಿಗೆ ಗೊತ್ತಿರುತ್ತದೆ. ಅದನ್ನು ಕೇಳಲು ಬಯಸುತ್ತಾರೆ. ಸ್ಟ್ಯಾಂಡ್‌ಅಪ್ ಅಂದರೆ ಅವರಿಗೆ ಕನೆಕ್ಟ್ ಆಗುತ್ತದೆ. ಸಾರ್ವಜನಿಕ ಕಾರ್ಯಕ್ರಮದಲ್ಲಿ ಶೇ. 90ರಷ್ಟು ಜನಕ್ಕೆ ಅದು ಏನೂ ಅಂತಾನೇ ಗೊತ್ತಿರುವುದಿಲ್ಲ. ಏನೋ ನಾಟಕ ಮಾಡ್ತಾನೆ ಅಂತ ನೋಡುತ್ತಿರುತ್ತಾರೆ. ಇವ್ನು ಏನೋ ಮಾತಾಡಿ ಹೋದ. ಮಿಮಿಕ್ರಿ ಮಾಡಲೇ ಇಲ್ಲ ಎಂದುಕೊಳ್ಳುತ್ತಾರೆ. ನಮ್ಮ ಶೋಗಳಿಗೆ ಟಿಕೆಟ್ ತೆಗೆದುಕೊಂಡು ಬರುವವರು ಭಿನ್ನ ಸಹೃದಯಿಗಳು. ನಾವು ಜೋಕ್ ಹೇಳಿದರೆ, ಅವರೂ ಕೆಲವೊಂದು ಸೇರಿಸುತ್ತಾರೆ. ನಮ್ಮ ರ್‍ಯಾಪೊ ಚೆನ್ನಾಗಿರುತ್ತದೆ. ಆದರೆ, ಜನಸಮುದಾಯವನ್ನು ನಗಿಸುವುದು ಅತ್ಯಂತ ಸವಾಲಿನ ಕೆಲಸ. ಏಕೆಂದರೆ ಭಿನ್ನ ವಯೋಮಾನ, ಭಿನ್ನ ಪ್ರದೇಶ, ಹಿನ್ನೆಲೆಯ ಜನ ಅಲ್ಲಿರುತ್ತಾರೆ. ನಗರ ಕೇಂದ್ರಿತ ಜೀವನ ಕ್ರಮ ವಿಡಂಬಿಸುವ ನನ್ನ ಮಾತಿನ ಅನೇಕ ಸಂಗತಿಗಳು ಅವರ ಅನುಭವಕ್ಕೆ ಬಂದಿರುವುದಿಲ್ಲ.

◆ **'ಕಾಮಿಡಿ ಕಿಲಾಡಿಗಳು' ಈ ಹಿಂದಿನ ಶೋಗಳ ಹಿನ್ನೆಲೆಯಲ್ಲಿ ನಿಮ್ಮ ಪಾತ್ರ ಹೇಗೆ ಭಿನ್ನ.**

ಅನುಭವ ಬೇರೆ ಇರಬಹುದು. ಏಕೆಂದರೆ ಈ 'ಕಾಮಿಡಿ ಕಿಲಾಡಿ'ಗಳಲ್ಲಿ ನಟರು ಮಾತ್ರ ಬರುತ್ತಿದ್ದರು. ನಟರ ಶಕ್ತಿ ಸಾಮರ್ಥ್ಯ ಹೆಚ್ಚಿರುತ್ತದೆ. ಸಾದಾ ಸೀದಾ ಬಂದು ಮಾತನಾಡಿ ಹೋಗುವ ನನಗೆ ಅದ್ದೂರಿತನ ಇರುವುದಿಲ್ಲ. ನಟರು ಬರುವಾಗ ಅಬ್ಬರದ ಸಂಗೀತ, ಶೈಲಿ ಭಿನ್ನವಾಗಿರುತ್ತದೆ. ಮೊದಲು ಬಂದಾಗ ಸ್ಟ್ಯಾಂಡ್‌ಅಪ್ ವರ್ಕ್ ಆಗುತ್ತದೆಯೋ ಇಲ್ಲವೋ ಎನ್ನುವ ಅನುಮಾನ ನನಗೂ ಕಾಡಿತ್ತು. 16 ಜನರ ತಂಡದಲ್ಲಿ ನನ್ನದು ಭಿನ್ನವಾದ ಪಾತ್ರ. 15 ಮಂದಿ ನಟರಿದ್ದಾರೆ. ಅವರ ರೂಪಕಗಳಿಗೆ ಬೇರೆ ಬೇರೆ ಲೇಖಕರು ಇರುತ್ತಾರೆ. ಅದನ್ನು ನಿರ್ದೇಶನ ಮಾಡುವ ತಂಡ ಕೂಡ ಇರುತ್ತದೆ. ಅವರು ನಿರಂತರ ಅಭ್ಯಾಸ ಮಾಡುತ್ತಾರೆ. ನಾನು ಒಬ್ಬ ಸುತ್ತಾಡಿಕೊಂಡು ನನ್ನ ಪಾಡಿಗೆ ನಾನು ಇರುತ್ತೇನೆ. ಚಿತ್ರೀಕರಣಕ್ಕೆ ಮಾತ್ರ ಹೋಗುತ್ತೇನೆ. ಕಂಟೆಂಟ್ ರಚನೆಯಲ್ಲಿ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟಿದ್ದಾರೆ. ಕಾಮಿಡಿ ಕಿಲಾಡಿಗಳಲ್ಲಿ ಇದು ಹೊಸ ಪ್ರಯತ್ನ. ಮುಂದಿನ ದಿನಗಳಲ್ಲಿ ಮತ್ತಷ್ಟು ಸ್ಟ್ಯಾಂಡ್‌ಅಪ್ ಕಾಮಿಡಿಯನ್ಸ್ ಬರಬಹುದು ಎನ್ನುವುದು ನನ್ನ ಆಶಯ.

■ **ರಾಘವೇಂದ್ರ ಕೆ.**